**OS.No**.14/2018 **PW**-1

**ದಿನಾಂಕಃ 28.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

ಮುಂದುವರೆದ ಪಾಟೀ ಸವಾಲು ಶ್ರೀ ಕೆ. ಕೆ ಆರ್ **ವಕೀಲರಿಂದ**

2ನೆಯ ಪ್ರತಿವಾದಿ ವಶದಲ್ಲಿ ದಾವಾ ಆಸ್ತಿಗಳು ಇವೆಯಾ ಎಂದರೆ ಸಾಕ್ಷಿ ಇಲ್ಲ ಅಂತ ನುಡಿಯುತ್ತಾರೆ. ಹಾಗಾದರೆ ದಾವಾ ಆಸ್ತಿಗಳು 1ನೆಯ ಪ್ರತಿವಾದಿಯ ಸ್ವಾಧೀನದಲ್ಲಿ ಇವೆಯಾ ಎಂದರೆ ಸಾಕ್ಷಿ ಇಲ್ಲ ಅಂತ ನುಡಿಯುತಾರೆ . 1 ಮತ್ತು 2ನೆಯ ಪ್ರತಿವಾದಿಯರ ಸ್ವಾಧೀನದಲ್ಲಿ ದಾವಾ ಆಸ್ತಿಗಳು ಇಲ್ಲ ಎಂದಾದರೆ ಏಕೆ ಅವರನ್ನ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದರೆ ಸಾಕ್ಷಿ ದಾವಾ ಆಸ್ತಿಗಳು ಮಂಜುನಾಥ ಮತ್ತು 1ನೆಯ ಪ್ರತಿವಾದಿಯ ಜಂಟಿ ಖಾತೆಯಲ್ಲಿ ಇದ್ದಿದ್ದರಿಂದ ಅವರನ್ನು ಪಕ್ಷಗಾರನ್ನಾಗಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಕೆ. ವಿ. ಮಂಜುನಾಥ ನನ್ನ ಪತಿ ಎಂದರೆ ಸರಿ. ನನ್ನ ಪತಿ 2 ನೆಯ ಪ್ರತಿವಾದಿಯ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಹಾಗೂ ಅಧೀಕ್ಷಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 22.08.2005ರ ವರೆಗೂ ನನ್ನ ಪತಿ ಅದೇ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ.

ದಾವಾ ಅನುಸೂಚಿ ಸ್ವತ್ತಿನಲ್ಲಿರುವ ಕಟ್ಟಡಗಳು ಸಂಸ್ಥೆಯ ಅಧೀಕ್ಷಕರಾಗಿದ್ದ ನನ್ನ ಪತಿ ಕೆ ವಿ ಮಂಜುನಾಥ ಹಾಗೂ ಸಂಸ್ಥೆಯ ಕಾರ್ಯದರ್ಶಿಯಾದ ಕೆ .ವಿ . ಶಂಭುಲಿಂಗಪ್ಪ ಅವರಿಗೆ ನೊಂದಣಿ ಕ್ರಯ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಸರಿ. ಖರೀದಿ ಆದ ನಂತರ ದಾವಾ ಅನುಸೂಚಿ ಸ್ವತ್ತಿನಲ್ಲಿ ನಮೂದಿಸಿದ ಖಾತಾ ಸಂಖ್ಯೆಗಳಲ್ಲಿ ಶಾಲಾ ಕಟ್ಟಡಗಳು ಕಟ್ಟಲ್ಪಟ್ಟಿರುತ್ತವೆ ಎಂದರೆ ಸರಿ . ದಾವಾ ಅನುಸೂಚಿ ಸ್ವತ್ತಿನಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕಿಂತ ಪೂರ್ವದಲ್ಲಿ 2ನೆಯ ಪ್ರತಿವಾದಿ ಸಂಸ್ಥೆಯವರು ಪಂಚಾಯಿತಿಯಿಂದ ಅನುಮೋದಿತ ನಕ್ಷೆ

ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿರುವ ಖಾತೆಗಳ ಕಟ್ಟಡಗಳ ಕಂದಾಯವನ್ನು 2ನೆ ಪ್ರತಿವಾದಿ ಸಂಸ್ಥೆಯವರೇ 3ನೇಯ ಪ್ರತಿವಾರದಿಗೆ ಸಂದಾಯ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ . ದಾವಾ ಅನುಸೂಚಿ ಸ್ವತ್ತಿನಲ್ಲಿರುವ ಕಟ್ಟಡಗಳನ್ನು ರಾಜ್ಯಸಭಾ ಸದಸ್ಯರ ಅನುದಾನದಿಂದ ಹಾಗೂ ಸಂಸ್ಥೆಯ ವಿದ್ಯಾರ್ಥಿಗಳು ಸಂದಾಯ ಮಾಡಿದ ಅಭಿವೃದ್ಧಿ ಶೂಲ್ಕದಿಂದ ಕಟ್ಟಲಾಗಿದೆ ಎಂದರೆ ಗೊತ್ತಿಲ್ಲ .

ನಾನು ಕಾಯಾರ್ಕಾರಿಣಿ ಸದಸ್ಯೆ ಮತ್ತು ನಿದೇರ್ಶಕಳಾಗಿ ಸೇವೆ ಸಲ್ಲಿಸುತ್ತಿದ್ದಾಗ 2ನೆಯ ಪ್ರತಿವಾದಿ ಸಂಸ್ಥೆಗೆ ಸಾಲ ಕೊಡಿಸುವಾಗ ಎಸ್ ಬಿ ಐ ಬ್ಯಾಂಕಿಗೆ ವೈಯಕ್ತಿಕ ಜಾಮೀನುದಾರಳಾಗಿದ್ದೆ ಎಂದರೆ ನೆನಪಿಲ್ಲ. ಸಾಲವನ್ನು 2ನೆಯಟು ಪ್ರತಿವಾದಿ ಸಂಸ್ಥೆಯವರೇ ತೀರುವಳಿಮಾಡಿರುತ್ತಾರೆ ಎಂದರೆ ಗೊತ್ತಿಲ್ಲ . ನನ್ನ ತಾಯಿಯ ಹೆಸರು ನಾಗರತ್ನಮ್ಮ ಎಂದರೆ ಸರಿ. ನನ್ನ ಮತ್ತು ಅವರ ಸಂಬಂಧ ಹಾಗೂ ಒಡನಾಟ ಚೆನ್ನಾಗಿದೆ. ನನ್ನ ತಾಯಿ ನಾಗರತ್ನಮ್ಮ 2ನೆಯ ಪ್ರತಿವಾದಿ ಸಂಸ್ಥೆಯ ಮೇಲೆ ಜೆ ಎಂ ಎಫ್ ಸಿ ನ್ಯಾಯಾಲದಲ್ಲಿ ಪಿ ಸಿ ಆರ್ ದಾಖಲಿಸಿದ್ದೆಕನೆಂದರೆ ಗೊತ್ತಿಲ್ಲ. ಸದರಿ ಪಿ ಸಿ ಆರ್ ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ . ಇದೇ ನ್ಯಾಯಾಲದಲ್ಲಿ ನನ್ನ ತಾಯಿ ಇನ್ನೊಂದು ಪಿ ಸಿ ಆರ್ ಹಾಕಿದ್ದೂ ಅದು ಚಾಲ್ತಿಯಲ್ಲಿದೆ ಎಂದರೆ ಗೊತ್ತಿಲ್ಲ.

ಶಾಲಾ ಆವರಣದಲ್ಲಿಯ ಮರ ಗಿಡಗಳನ್ನು ಕಡಿಯಬಾರದು ಎಂದು ನಾನು ಅರಣ್ಯ ಅಧಿಕಾರಿಗಳಿಗೆ ದೂರು ಕೊಟ್ಟಿದ್ದೆ ಎಂದರೆ ಸಾಕ್ಷಿ ಶಾಲಾ ಆವರಣದಲ್ಲಿ ಅಲ್ಲ, ಸರ್ವೆ ನಂ 43/15 ಹಾಗೂ 43/24ರಲ್ಲಿಯ ಗಿಡಗಳನ್ನು ಕಡಿಯಾಬಾರದೆಂದು ದೂರು ಕೊಟ್ಟಿದ್ದೆ

ಎಂದು ನುಡಿಯುತ್ತಾರೆ . ನೀವು ಕೊಟ್ಟಂತಹ ದೂರು ಶಾಲಾ ಆವರಣಕ್ಕೆ ಸಂಬಂಧಿಸಿದೆಯೋ ಇಲ್ಲವೊ ಎಂದರೆ ಸಾಕ್ಷಿ ಇಲ್ಲ ಅಂತ ನುಡಿಯುತ್ತಾರೆ . ದೂರು ಕೊಟ್ಟ ನಂತರ ಅರಣ್ಯ ಸಂರಕ್ಷಣಾಧಿಕಾರಿಗಳು ಸ್ಥಳಕ್ಕೆ ಬಂದಿದ್ದು ನಾನು ಸಹ ಸ್ಥಳಕ್ಕೆ ಹೋಗಿದ್ದೆ ಎಂದರೆ ಸರಿ . ಕಡಿದಂತಹ ಗಿಡಗಳನ್ನು ಕಾಲೇಜಿನ ಒಂದು ಕೋಣೆಯಲ್ಲಿ ಅಧಿಕಾರಿಗಳು ಇಟ್ಟು ಹೋದರು ಎಂದರೆ ಸಾಕ್ಷಿ ಅಧಿಕಾರಿಗಳು ಯಾವುದೋ ಒಂದು ಕೋಳಣೆಯಲ್ಲಿ ಶೇಖರಿಸಿ ಇಡುತ್ತೇವೆ ಎಂದು ಹೇಳಿದ್ದರು, ಎಲ್ಲಿ ಇಟ್ಟರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಿವಿಲ್ ಪ್ರಕರಣ ಮುಗಿದ ತಕ್ಷಣ ಸಂಬಂಧಪಟ್ಟವರು ಅವುಗಳನ್ನ ತೆಗೆದುಕೊಳ್ಳಬಹುದು ಎಂದು ಅರಣ್ಯ ಅಧಿಕಾರಿಗಳು ಸೂಚಿಸಿದರು ಎಂದರೆ ಸರಿ.

**3**ನೆಯ ಪ್ರತಿವಾದಿಯು ದಾವಾ ಅನುಸೂಚಿ ಸ್ವತ್ತಿಗೆ ಮೂಲಭೂತ ಸೌಕಯರ್ಗಳಾದ ನೀರು ಮತ್ತು ವಿದ್ಯುತ್ ಸೌಕಯರ್ಗಳನ್ನು ಕಲ್ಪಿಸಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಕಾಯಾರ್ಕಾರಿಣಿ ಸದಸ್ಯೆ ಹಾಗೂ ನಿರ್ದೇಶಕಿಯಾಗಿದ್ದಾಗ ಹೊಳೆನರಸೀಪುರದ ತಾಲ್ಲೂಕು ಸೇವಾ ಸಮೀತಿಯಿಂದ ಕಾನೂನು ಅರಿವು ನೆರವು ಕಾಯಾರ್ಕ್ರಮವನ್ನು ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಖಾತಾ ನಂಬರುಗಳಿಗೆ **3** ನೆಯ ಪ್ರತಿವಾದಿ **11** ಎ ದಲ್ಲಿ ಖಾತೆ ನೀಡಿದ್ದಾರೋ ಅಥವಾ **9** ಎ ದಲ್ಲಿ ನೀಡಿದ್ದಾರೋ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತಿನಲಿಪ್ಲಿರುವ ಕೆಲವೊಂದು ಖಾತೆಗಳನ್ನ **3**ನೆಯ ಪ್ರತಿವಾದಿ **11** ಎ ದಲ್ಲಿ ಇನ್ನೂ ಕೆಲವೊಂನದನ್ನ **9** ಎ ದಲ್ಲಿ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ.

ಶ್ರೀ. ಕೆ.ಕೆ.ಆರ್. ವಕೀಲರು ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.